# 8

# ನಮ್ಮ ಪಾಪಗಳಿಗಾಗಿ, ನಾವುಗಳು ಏನು ಮಾಡಬಹುದು?

# (4:11-16)

ದೇವರ ಮಗುವಿನಲ್ಲಿರುವ ಪಾಪವು ಭಯಂಕರವಾದ ಪರಿಣಾಮವನ್ನು ಹೊಂದಿರುತ್ತದೆ. ಇಸ್ರಾಯೇಲ್ಯರಲ್ಲಾದ ಪಾಪದ ಪರಿಣಾಮವನ್ನು ಈಗಾಗಲೇ ಗಮನಿಸಿದ್ದೇವೆ. ಅದು ಅವರ ಹೃದಯಗಳನ್ನು ಕಠಿಣಮಾಡಿ, ಅವರಲ್ಲಿ ಅಪನಂಬಿಕೆಯನ್ನು ಉಂಟುಮಾಡಿ, ಪೂರ್ತಿ ಜನಾಂಗವು ವಾಗ್ದಾನ ದೇಶವನ್ನು ತಲುಪದಂತೆ ಮಾಡಿತು. ಇದೇ ಅಪಾಯವು ದೇವಜನರಿಗೂ ಸಂಭವಿಸಬಹುದು ಎಂದು ಇಬ್ರಿಯ ಬರಹಗಾರನು ಮುಂತಿಳಿಸಿರುವನು. ಆದ್ದರಿಂದ ಇಸ್ರಾಯೇಲ್ಯರು ಮಾಡಿದ ತಪ್ಪುಗಳನ್ನು ಮಾಡದಂತೆ, ಕ್ರೈಸ್ತರಿಗೆ ಎಚ್ಚರಿಕೆ ನೀಡಿರುವನು (ವಚನ 11).

ಪಾಪವು ಇಷ್ಟೊಂದು ಭಯಾನಕವಾಗಿರುವದರಿಂದ, ಅದಕ್ಕೆ ಪರಿಹಾರವೇನು? ವಿಶೇಷ ವಾಗಿ, ದೇವರ ಮಗುವಾದವನು ತನ್ನ ಪಾಪದ ಬಗ್ಗೆ ಏನು ಮಾಡಬಹುದು? ಈಗಾಗಲೇ, ಎರಡನೇ ಎಚ್ಚರಿಕೆಯನ್ನು ನಿಮಗೆ ನೀಡಲಾಗಿದೆ (4:1-16). ಪಾಪದ ಪರಿಹಾರಕ್ಕಾಗಿ ಇರುವ ಸಲಹೆಗಳನ್ನು ಮುಂದಿನ ಆರು ವಚನಗಳಿಂದ ಕಲಿಯೋಣ.

## ಪಾಪವನ್ನು ಬಚ್ಚಿಡಲಾರೆವು (4:11-13)

ಅನೇಕರು ಪಾಪದೊಂದಿಗೆ ನಾನಾ ಮಾರ್ಗಗಳಲ್ಲಿ ವ್ಯವಹರಿಸುವರು. ಹಲವರು ಅದನ್ನು ತಿರಸ್ಕರಿಸುವರು; ಹಲವರು ಅಲಕ್ಷಿಸುವರು ಹಲವರು ನೆಪ ಹೇಳುವರು. ಅದನ್ನು ಬಚ್ಚಿಡುವವರು ಕೂಡ ಇರುವವರು. ಇಬ್ರಿಯ ಬರಹಗಾರರು ಪಾಪವನ್ನು ಬಚ್ಚಿಡುವುದು ಅಸಾಧ್ಯವೆಂದು ಹೇಳಿದರು. ವಾಕ್ಯವು ಅದನ್ನು ಬಹಿರಂಗಮಾಡುವದು (ವಚನ 12). ಅದೂ ಅಲ್ಲದೆ ನಾವು ಪಾಪ ಮಾಡಿದಾಗ ದೇವರು ಅರಿತಿರುವನು (ವಚನ 13).

### ವಾಕ್ಯವು ನಮ್ಮ ಪಾಪಗಳನ್ನು ಬಹಿರಂಗ ಪಡಿಸುತ್ತದೆ (4:12).

ವಚನ 12 ಮತ್ತು 13ರಲ್ಲಿ ಬರಹಗಾರನ ಎಲ್ಲಾ ಅಲೋಚನೆಗಳನ್ನು ತಿಳಿಸಿರುವದಿಲ್ಲ; ಆದರೆ ವಚನ 14ರಲ್ಲಿ, ಒಂದು ಕಾರಣವನ್ನು ತಿಳಿಸಲಾಗಿದೆ, ಅದು ಹಿಂದಿನ ಪಾಠಕ್ಕೆ ಸಂಬಂಧಪಟ್ಟದ್ದಾಗಿದೆ. ಇಸ್ರಾಯೇಲ್ಯರು ದೇವರ ವಾಕ್ಯವನ್ನು ಗಮನಿಸದೆ ಹೋದದರಿಂದ ಸೋತುಹೋದರು. ದೇವ ವಾಕ್ಯದ ಬೋಧನೆಯನ್ನು ನಾವುಗಳು ಗಮನಿಸದೆ ಹೋದರೆ, ಇಸ್ರಾಯೇಲ್ಯರಿಗಾದ ಗತಿಯೇ ನಮಗುಂಟಾಗುತ್ತದೆ.

"ದೇವವಾಕ್ಯ" ಅಂದರೆ, ಹಳೆ ಒಡಂಬಡಿಕೆಯ ವಾಕ್ಯವಾಗಿದೆ. ಅದು ದೇವರು ಪ್ರಕಟಮಾಡಿರುವ ಸಕಲ ವಾಕ್ಯಕ್ಕೂ ಅನ್ವಹಿಸುತ್ತದೆ. ದೇವರ ವಾಕ್ಯದ ಬಲವನ್ನು ಬರಹಗಾರನು ತಿಳಿಸಿರುವನು. ಮೊದಲನೆಯದಾಗಿ ಅದು ಸಜೀವವಾದದ್ದು ಮತ್ತು ಕಾರ್ಯಸಾಧಕವಾದದ್ದು: ಕೀರ್ತನೆ 95 ರಿಂದ ಉಲ್ಲೇಖಿಸಿರುವ ವಾಕ್ಯವು ಅನೇಕ ಶತಮಾನಗಳ ಹಿಂದೆ ಬರೆಯಲ್ಪಟ್ಟದ್ದು. "ಶಕ್ತಿಯುತ್ತ" ಅಥವಾ ಕಾರ್ಯಸಾಧಕವಾದ ಆ ವಾಕ್ಯವು ಸಜೀವವುಳ್ಳದಾಗಿದ್ದು, ಕ್ರಿಯಾಶೀಲವೂ ಆಗಿರುವದರಿಂದ, ದೇವರ ಉದ್ದೇಶಗಳನ್ನು

ಸಾಧಿಸುತ್ತದೆ (ನೋಡಿರಿ ಯೆಶಾಯ 55:11).

ದೇವರ ವಾಕ್ಯವು "ಇಬ್ಬಾಯಿಕತ್ತಿಗಿಂತಲೂ ಹದವಾದದ್ದು" (ವಚನ 12ಎ). ಈ ವಾಕ್ಯವನ್ನು ಕತ್ತಿ ಎಂದೂ ವಿವರಿಸಬಹುದು (ಎಫೆಸ 6:17). ಈ ಸಂದರ್ಭದಲ್ಲಿ, ಒಬ್ಬ ವೈದ್ಯನು ಶಸ್ತ್ರ ಚಿಕಿತ್ಸೆ ಮಾಡಿ ಒಳಗಿನ ಅಂಶಗಳನ್ನು ಬಹಿರಂಗ ಪಡಿಸುವ ಕತ್ತಿಗೆ ಹೋಲಿಸಬಹುದು. ಮನುಷ್ಯನ ಅಂತರಾಳದಲ್ಲಿರುವ ಪಾಪವನ್ನೂ, ದೇವರ ವಾಕ್ಯವು ಬಹಿರಂಗ ಪಡಿಸುತ್ತದೆ.

"ಇಬ್ಬಾಯಿಕತ್ತಿಯಂತಿರುವ - ದೇವರ ವಾಕ್ಯವು ಪ್ರಾಣ ಆತ್ಮಗಳನ್ನು" ಕೀಲು ಮಜ್ಜೆಗಳನ್ನು ವಿಭಾಗಿಸುತ್ತದೆ (ವಚನ 12ಬಿ). ಇಲ್ಲಿ ಬಹಗಾರನು ಕೀಲು ಮಜ್ಜೆಗಳನ್ನು ಏಕೆ ಸೇರಿಸಿದನು. ಆತ್ಮ ಪ್ರಾಣ, ದೇಹಗಳು ಸೇರಿ ಒಂದು ವ್ಯಕ್ತಿತ್ವವಾಗುತ್ತದೆ ಎಂಬ ಸತ್ಯಾಂಶವನ್ನು ತಿಳಿಸಿರಬಹುದು (ಕೀಲು ಮಜ್ಜೆಗಳ ಸಹಿತ) (1 ಥೆಸಲೋನಿಕ 5:23). ಮನುಷ್ಯರ ಅಂತರಾಳವನ್ನು ದೇವರ ವಾಕ್ಯವು ಬಯಲು ಮಾಡುತ್ತದೆ. ಯಥಾರ್ಥ ವಾದ ಹೃದಯದಿಂದ ವಾಕ್ಯವನ್ನು ಗಮನಿಸುವದಾದರೆ ನಮ್ಮ ನಿಜತ್ವವನ್ನು ನಾವೇ ಅರಿಯಲು ಸಾಧ್ಯ (ಯಾಕೋಬ 1:22-25).

ಆದ್ದರಿಂದ "ದೇವರ ವಾಕ್ಯವು *ಹೃದಯದ* ಆಲೋಚನೆಗಳನ್ನು ಉದ್ದೇಶಗಳನ್ನು ವಿವೇಚಿಸುವಂಥದ್ದು ಆಗಿದೆ" (ವಚನ 12ಸಿ; ಒತ್ತಿ ಹೇಳಿದ್ದು ನನ್ನದು). ಹೃದಯದ ಸಮಸ್ಯೆಯಿಂದ ಇಸ್ರಾಯೇಲ್ಯರು, ಅರಣ್ಯದಲ್ಲಿ ಸೋತುಹೋದರು. ದೇವರ ವಾಕ್ಯಕ್ಕೆ ನಮ್ಮ ಜೀವಿತಗಳನ್ನು ಹೋಲಿಸುವದಾದರೆ, ನಮ್ಮ ಹೃದಯದ ರಹಸ್ಯಗಳು ಬಯಲಾಗುತ್ತದೆ.

**ನಾವು ಪಾಪ ಮಾಡುವಾಗ, ದೇವರು ಅದನ್ನು ತಿಳಿಯುತ್ತಾನೆ (4:13).**

ಬರಹಗಾರನು ಈಗ ದೇವರ ವಾಕ್ಯದಿಂದ ದೇವರೆಡೆಗೆ ಚಲಿಸುತ್ತಿದ್ದಾನೆ. ದೇವರ ವಾಕ್ಯವು ದೇವರನ್ನೇ ಬಿಂಬಿಸುವದರಿಂದ, ವಾಕ್ಯವನ್ನು ದೇವರಿಂದ ಪ್ರತ್ಯೇಕಮಾಡಲಾಗದು.

ಯಾರೂ ಸಹ ದೇವರಿಂದ ಮರೆಯಾಗಿರಲಾರರು ಎಂದು ವಾಕ್ಯಭಾಗ ಹೇಳುತ್ತದೆ: "ಆತನ ದೃಷ್ಟಿಗೆ ಸಮಸ್ತವೂ ಮುಚ್ಚು ಮರೆಯಲ್ಲದಾಗಿಯೂ ಬೈಲಾದದ್ದಾಗಿಯ ಅದೆ" (ವಚನ 13ಎ). ಎಲ್ಲವೂ ಬೆತ್ತಲೆಯಾಗಿದೆ ಎಂದು KJV ಹೇಳುತ್ತದೆ. "ಗ್ರೀಕ್‌ನ ಮೂಲ ಹೇಳಿಕೆಯಾಗಿದೆ. ಒಬ್ಬನು ತನ್ನ ದೇಹದ ನ್ಯೂನ್ಯತೆಗಳನ್ನು ಮುಚ್ಚಿಡಲು ಬಹಳ ಪ್ರಯತ್ನ ಮಾಡಬಹುದು.[1] ಒಂದು ವೇಳೆ ಅವನ ಬಟ್ಟೆಗಳನ್ನು ಪೂರ್ಣವಾಗಿ ಕಳಚಿ ಹಾಕುವದಾದರೆ, ಅವನ ಪರಿಸ್ಥಿತಿ ಏನಾಗಬಹುದು. ಬಾಹಿರವಾದ ಧರ್ಮಾಚರಣೆಯಿದ್ದರೂ, ದೇವರು ನಮ್ಮ ಅಂತರಾಳವನ್ನೇ ನೋಡುತ್ತಾನೆ.

"ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು ಒಂದೂ ಇರುವದಿಲ್ಲ" (ವಚನ 13ಸಿ). NIVಯಲ್ಲಿ, "ನಾವು ಯಾವಾತನಿಗೆ ಲೆಕ್ಕಕೊಡಬೇಕೋ," ಆತನ ಮುಂದೆ ಒಂದು ದಿನ ನಿಂತುಕೊಂಡು, ನಾವುಗಳು ಮಾಡಿದ ಸಂಗತಿಗಳಿಗೆ ಲೆಕ್ಕಕೊಡಬೇಕು. ಆದ್ದರಿಂದ ನಮ್ಮ ಪಾಪಗಳಿಗಾಗಿ ಮಾನಸಾಂತರ ಪಟ್ಟು, ನಮ್ಮ ಜೀವಿತಗಳನ್ನು ಬದಲಿಸಿಕೊಳ್ಳಬೇಕು!

## ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಯೇಸುವಿನ ಕರುಣೆಯ ಕಡೆಗೆ ತಿರುಗಿಕೊಳ್ಳ ಬೇಕು (4:14-16)

ನಾವು ನಮ್ಮ ಪಾಪಗಳನ್ನು ಅಡಗಿಸಿಡಲು ಸಾಧ್ಯವಿರದಾಗ, ಅವುಗಳ ಬಗ್ಗೆ ಏನು ಮಾಡೋಣ? ನಾವು ಅವುಗಳನ್ನು ಒಪ್ಪಿಕೊಂಡು, ಯೇಸುವಿನ ಕರುಣೆಯ ಕಡೆಗೆ ತಿರುಗಿಕೊಳ್ಳಬೇಕು. ಕರುಣೆಯ ಯೇಸುವಿನ ಬಗ್ಗೆ ವಚನ 14ರಿಂದ 16ರವರೆಗೆ ಅದ್ಭುತವಾದ ಸತ್ಯಗಳನ್ನು ತಿಳಿಸಲಾಗಿದೆ. ವಚನ 14ರಲ್ಲಿ, ದೇವ ಕುಮಾರನಾದ ಯೇಸುವೆಂಬ ಶ್ರೇಷ್ಟ ಮಹಾಯಾಜಕನು ನಮಗಿರುವದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ - ಅದು ದೀಕ್ಷಾಸ್ನಾನದ ಮುನ್ನ, "ಯೇಸುವು, ಕ್ರಿಸ್ತನೆಂದು" ಮಾಡಿದ

ಪ್ರತಿಜ್ಞೆಯಾಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 8:35-38; KJV). ನಾವು ಆ ಪ್ರತಿಜ್ಞೆಯನ್ನು ದೃಢವಾಗಿ ಹಿಡಿದುಕೊಂಡರೆ, ನಾವು ಆತನನ್ನು ಅನುಸರಿಸುವದರಲ್ಲಿ ಹಿಂಜಾರಿ ಹೋಗುವದಿಲ್ಲ.

**ನಮಗಿರುವ ಮಹಾಯಾಜಕನು ಅನುತಾಪ ಹೊಂದಿದ್ದಾನೆ (4:15).**

ವಚನ 15ರ ವಾಕ್ಯವನ್ನು ವಿವರಿಸುವದಾದರೆ, ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ. "ಗ್ರೀಕರು ಅನುತಾಪವಾಗಲೀ ಚಿಂತನೆಯಾಗಲೀ ಹೊಂದಿದ ದೇವರುಗಳನ್ನು ಹೊಂದಿರಲಿಲ್ಲ." ಹಾಗೂ ಅವರು ಪಾಪರಹಿತರೂ ಆಗಿರಲಿಲ್ಲ. ಗ್ರೀಕರ ಪುರಾಣದಂತೆ, ಅವರು ಮನುಷ್ಯರಿಗಿಂತಲೂ ಕೆಟ್ಟದ್ದಾಗಿ ವರ್ತಿಸಿದರು ಎಂಬುದಾಗಿದೆ. ನಮ್ಮ ಮಹಾಯಾಜಕನಿಗೆ ಹೋಲಿಸುವಂಥ ಯಾವುದೇ ಸ್ವಭಾವಗಳು ಗ್ರೀಕರ ಬರವಣಿಗೆಗಳಲ್ಲಿ ಇರುವದಿಲ್ಲ; ತನ್ನ ಅನುಯಾಯಿಗಳನ್ನು ಕನಿಕರಿಸಿ, ಅವರು ಅನುಭವಿಸಬೇಕಿದ್ದ ಬಾಧೆಗಳನ್ನು ಆತನೇ ಅನುಭವಿಸಿದನು.

**ನಾವು ಧೈರ್ಯದಿಂದ ಆತನ ಬಳಿಗೆ ಬರಬಹುದು (4:16).**

"ಆದ್ದರಿಂದ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ" (ವಚನ 16ಎ). ಒಂದು ದಿನ ಯೇಸು ಸಿಂಹಾಸನ ತೀರ್ಪು ನೀಡುವ ಸಿಂಹಾಸನವಾಗುತ್ತದೆ; ಆದರೆ ನಂಬಿಗಸ್ತರಾದ ದೇವರ ಮಕ್ಕಳಿಗೆ ಈ ದಿನ ಅದು "ಕೃಪಾಸನವಾಗಿದೆ" ಅದರ ಅರ್ಥವೇನೆಂದರೆ, "ಅದು ಕೃಪೆ ಇರುವ ಸಿಂಹಾಸನವಾಗಿದೆ."

ನಾವುಗಳು ಕರುಣೆಗಾಗಿ, ಹಾಗೂ ದಯೆಗಾಗಿ ಕೃಪಾಸನದ ಮುಂದೆ ಬರಬೇಕು (ವಚನ 16ಎ). ನಮ್ಮ ರಕ್ಷಣೆಗೆ ಕರುಣೆ ಹಾಗೂ ದಯೆಯ ಅಗತ್ಯವಿದೆ; ರಕ್ಷಣೆಯಲ್ಲಿ ಮುಂದುವರೆಯಲೂ ದಯೆ ಹಾಗೂ ಕರುಣೆಯ ಅಗತ್ಯವಿದೆ. "ಕೊರತೆಯ ಸಮಯದಲ್ಲಿ ಸಮಯೋಚಿತವಾದ ಸಹಾಯ" ಎಂದು ಅನುವಾದವಾಗಿದೆ. ಆತನು ನಮ್ಮ ಕುರಿತಾಗಿ ಹೊಂದಿರುವ ತಿಳುವಳಿಕೆಗಾಗಿ, ಆತನ ಸಹಾಯಕ್ಕಾಗಿ ಕೃತಜ್ಞರಾಗಿರೋಣ!

ನಮ್ಮ ಪಾಪಗಳ ಕುರಿತು ನಾವೇನು ಮಾಡಬಹುದು? ಅದನ್ನು ತಿಳಿದಾಗ, ನಾವು ಅದನ್ನು ಮುಚ್ಚಿಡಲು ಸಾಧ್ಯವಿಲ್ಲ, ನಾವು ಅದನ್ನು ಅರಿಕೆ ಮಾಡಿ ನಂಬಿಕೆಯಿಂದ ಯೇಸುವಿನ ಕಡೆಗೆ ತಿರುಗಿಕೊಳ್ಳಬೇಕು (5:8, 9; ಮಾರ್ಕ 16:15, 16). ಕರುಣೆಗಾಗಿ ಆತನ ಬಳಿಗೆ ಬರೋಣ. ಕ್ರೈಸ್ತರಾಗಿ ನಂಬಿಕೆಯಿಂದಿರುವಾಗಲೂ, ಕೆಲವು ಸಾರಿ ಅಧೈರ್ಯಗೊಳ್ಳಬಹುದು. ಅಧೈರ್ಯಗೊಳ್ಳುವಾಗ, ನಾವು "ಪ್ರಾರ್ಥನೆಯಲ್ಲಿ ಆತನ ಸಹಾಯಕ್ಕೆ ಬರಬೇಕು."

---

ಟಿಪ್ಪಣಿ

[1]ನಾವಿರುವಂಥ ಸ್ಥಳದಲ್ಲಿ, ಪಾದರಕ್ಷೆಗಳನ್ನು ತೊಡುವಾಗ, ಅವನು ಎತ್ತರವಾಗಿ ಕಾಣುವನು ಉತ್ತಮವಾದ ಉಡುಗೆ ತೊಡುಗೆಗಳನ್ನು ಧರಿಸುವ ವಿಚಾರದಲ್ಲಿ ಚರ್ಚಿಸಬಹುದು.